<u>ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ,</u>
<u>ಬೆಂಗಳೂರು ಗ್ರಾಮಾಂತರ ಜಿಲ್ಲೆ, ಬೆಂಗಳೂರು</u>

**S.C. No. 282/2025**

| ಸಾಕ್ಷಿಯ ಹೆಸರು | ಶ್ರೀ. ವೇದೇಶ | ಚಾಸಾಃ | ಫ್ರಾಸಾಃ |
|---|---|---|---|
| ತಂದೆಯ ಹೆಸರು | ಲೇಟ್ ವೀರಭದ್ರಪ್ಪ | 2 | 3 |
| ವಯಸ್ಸು | 32 ವರ್ಷ | ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಭೋಧಿಸಲಾಯಿತು. ದಿನಾಂಕ **01.04.2026.** | |
| ಉದ್ಯೋಗ | ಚಾಲಕ | | |
| ವಾಸ ಸ್ಥಳ | ಚಿಮಸಂದರ | | |

ಮುಖ್ಯ ವಿಚಾರಣೆಃ ಸರ್ಕಾರಿ ಅಭಿಯೋಜಕರಿಂದಃ

1. ಮೃತ ಅನ್ನಪೂರ್ಣ ರವರು ಚೆನ್ನಮ್ಮ / ಚಾಸಾ. 1 ರವರ ಮನೆಯಲ್ಲಿ ಬಾಡಿಗೆಗೆ ಇರುತ್ತಿದ್ದರು. ನಮ್ಮ ಮನೆಯಿಂದ ಚೆನ್ನಮ್ಮ ರವರ ಮನೆ 100 ಮೀಟರ್ ದೂರದಲ್ಲಿ ಇದೆ. ಆರೋಪಿಯನ್ನು ಪರಪ್ಪನ ಅಗ್ರಹಾರದಿಂದ ವಿಡಿಯೋ ಕಾನ್ಫರೇನ್ಸ ಮೂಲಕ ಹಾಜರು ಪಡಿಸಿದ್ದು ಸಾಕ್ಷಿ ಗುರುತಿಸಿರುತ್ತಾರೆ. ಆರೋಪಿ ಮೃತಳ ಮಗ. ದಿನಾಂಕ 05.05.2025 ರಂದು ಬೆಳಗ್ಗೆ 10.30 ಕ್ಕೆ ಚಾಸಾ. 1 ರವರು ಆರೋಪಿಯ ಬಳಿ ಆರೋಪಿಯ ತಾಯಿ ಹಾಗೂ ಮಗು ಒಂದು ವಾರದಿಂದ ಕಾಣುತ್ತಿಲ್ಲ ಎಂದು ಪ್ರಶ್ನೆ ಮಾಡುತ್ತಿದ್ದರು. ಆಗ ಆರೋಪಿ ನಮ್ಮ ತಾಯಿ ಮೈಸೂರಿಗೆ ಹೋಗಿದ್ದಾರೆ ಎಂದು ತಿಳಿಸಿದ. ದಿನಾಂಕ 06.05.2025 ರಂದು ಸಂಜೆ 6.30 – 7.00 ಗಂಟೆ ಸಮಯದಲ್ಲಿ ಮನೆಗೆ ಹೋಗುತ್ತಿದ್ದಾಗ ಆರೋಪಿಯ ರವರ ಮನೆಯ ಮುಂದೆ ಬಹಳ ಜನ ಸೇರಿದ್ದರು ಹಾಗೂ ಅಲ್ಲಿ ಇದ್ದವರು ಆ ಮನೆಯಿಂದ ವಾಸನೆ ಬರುತ್ತಿದೆ ಎಂದು ಹೇಳಿದರು. ಆರೋಪಿಯ ಮನೆ ಡೋರ್ ಲಾಕ್ ಆಗಿದ್ದು ಜೋರಾಗಿ ತಳ್ಳಿದಾಗ ಬಾಗಿಲು ತೆರೆದಿದ್ದು ಬೆಡ್ ರೂಂ ನ ನೆಲದ ಮೇಲೆ ಶವಗಳು ಇದ್ದು ಹಾಗಾ ಎರಡು ಶವಗಳು ಹುಳ ಬಿದ್ದಿತ್ತು. ಆರೋಪಿಯ ತಾಯಿ ಹಾಗೂ ಆರೋಪಿಯ ಅಣ್ಣನ ಮಗನ ಶವ ಇದ್ದವು. ಶವಗಳ ಕುತ್ತಿಗೆ ಮೇಲೆ ನೈಲಾನ್ ಹಗ್ಗ ಇತ್ತು.

2. ಪೊಲೀಸರಿಗೆ ವಿಚಾರ ತಿಳಿಸಿದ್ದು, ಅವರ ಬಂದು ದಿಕ್ಷೀತ್ ಹಾಗೂ ಪರಶುರಾಮ್ ರವರನ್ನು ಕರೆದುಕೊಂಡು ಬಂದು ಸ್ಥಳ ಮಹಜರ್ ಅನ್ನು ಮಾಡಿದರು. ನಾನು ಪೊಲೀಸರಿಗೆ ಸ್ಥಳವನ್ನು ತೋರಿಸಿದೆ.

ಸದರಿ ಮಹಜರ್ ಗೆ ನಾನು ಕೂಡ ಸಹಿ ಮಾಡಿದ್ದು ಅದನ್ನು ನಿಶಾನೆ.ಪಿ. 2 ಎಂದು ಸಾಕ್ಷಿಯ ಸಹಿಯನ್ನು ನಿಶಾನೆ.ಪಿ. 2 (ಎ) ಎಂದು ಗುರುತಿಸಲಾಯಿತು. ಸದರಿ ಮಹಜರ್ ಹಾಗೂ ನೋಟೀಸ್ ಅನ್ನು ಲ್ಯಾಪ್ ಟಾಪ್ ನಲ್ಲಿ ಟೈಪ್ ಮಾಡಿದರು. ನೋಟೀಸ್ ಅನ್ನು ಸಹ ನನಗೆ ಅಲ್ಲಿ ನೀಡಿದರು. ನೋಟೀಸ್ ಅನ್ನು ನಿಶಾನೆ.ಪಿ. 3 ಎಂದು ಸಾಕ್ಷಿಯ ಸಹಿಯನ್ನು ನಿಶಾನೆ.ಪಿ. 3 (ಎ) ಎಂದು ಗುರುತಿಸಲಾಯಿತು. ಸ್ಥಳದಲ್ಲಿ ಫೋಟೋ ತೆಗೆದರು. ಸಾಕ್ಷಿ 9 ಫೋಟೋಗಳನ್ನು ಗುರುತಿಸಿದ್ದು ಅವುಗಳನ್ನು ನಿಶಾನೆ.ಪಿ. 4 ರಿಂದ 12 ಎಂದು ಗುರುತಿಸಲಾಯಿತು. ಈ ಬಗ್ಗೆ ಹೇಳಿಕೆ ನೀಡಿದ್ದೇನೆ. ಆರೋಪಿತನೇ ಆ ಕೊಲೆಗಳನ್ನು ಮಾಡಿದ್ದಾನೆ ಎಂದು ನಂತರ ಗೊತ್ತಾಯಿತು.

(ಈ ಹಂತದಲ್ಲಿ ಮು.ಮಾಗಳನ್ನು ಗುರುತಿಸುವ ಸಲುವಾಗಿ ಮುಂದುವರಿದ ಮುಖ್ಯ ವಿಚಾರಣೆಯನ್ನು ಮೂಂದೂಡಲಾಯಿತು)

(ಈ ಸಾಕ್ಷಿದಾರರನ್ನು ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ವಿಚಾರಣೆ ಮಾಡಿದ್ದು ಅದನ್ನು ಯಥಾವತ್ತಾಗಿ ಉಕ್ತಲೇಖನ ನೀಡಿ ಬೆರಳಚ್ಚು ಮಾಡಿಸಲಾಯಿತು)

ಓ. ಹೇ. ಕೇ. ಸರಿ ಇದೆ,

**(ಶ್ರೀಮತಿ. ಬಿ.ಎಸ್.ರೇಖಾ )**
ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಬೆಂಗಳೂರು ಗ್ರಾಮಾಂತರ ಜಿಲ್ಲೆ, ಬೆಂಗಳೂರು.